ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ವಾದಿ ಪರ ಶ್ರೀ ಹೆಚ್.ಡಿ.ಎಲ್ ವಕೀಲರಿಂದಃ

ನನಗೆ ವಿದ್ಯಾಭ್ಯಾಸವಿಲ್ಲ. ವಾದಿಯರು ಪ್ರತಿವಾದಿಯರ ವಿರುದ್ಧ ಯಾವ ಉದ್ದೇಶಕ್ಕೆ ಈ ದಾವೆ ಸಲ್ಲಿಸಿದ್ದಾರೆಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ನನಗೆ ದಾವಾ ಸ್ವತ್ತಿನ ಸರ್ವೇ ನಂಬರ್, ವಿಸ್ತೀರ್ಣ ಗೊತ್ತಿಲ್ಲ. ದಾವಾ ಸ್ವತ್ತುನ ಮೂಲತಃ ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ, ಸಾಕ್ಷಿಯು ಸ್ವತಃ ನಾನು ಪಕ್ಕದಲ್ಲಿದ್ದೇನೆ ಎಂದು ನುಡಿಯುತ್ತಾರೆ. ನಾನು ಈ ದಾವೆಯಲ್ಲಿ ಸಾಕ್ಷಿ ನುಡಿಯಲು ಬರುವ ಮೊದಲು ಈ ದಾವೆಗೆ ಸಂಬಂಧಪಟ್ಟ ದಾಖಲೆಗಳ ಬಗ್ಗೆ ಕೇಳಿ ತಿಳಿದುಕೊಂಡಿಲ್ಲ. ನಮ್ಮ ಗ್ರಾಮದ ಶಿವಣ್ಣನವರ ತಂದೆ ಮಾಯಿಗೇಗೌಡ ಎಂದರೆ ಸರಿ, ಸಾಕ್ಷಿಯು ಸ್ವತಃ ಅವರು ನಮ್ಮ ಮನೆಯ ಎದುರುಗಡೆ ಇದ್ದಾರೆ ಎಂದು ನುಡಿಯುತ್ತಾರೆ. ಮಾಯಿಗೇಗೌಡ ಕೆ.ಇ.ಬಿ ಯಲ್ಲಿ ಲೈನ್‌ಮ್ಯಾನ್ ಆಗಿ ಕೆಲಸ ಮಾಡುತ್ತಿದ್ದರು ಎಂದರೆ ಗೊತ್ತು ಎಂದು ಸಾಕ್ಷಿಯು ನುಡಿಯುತ್ತಾರೆ. ಕಾರಣ ಅವರನ್ನು ಎಲೆಕ್ಟ್ರಿಕಲ್ ಮಾಯಿಗೇಗೌಡ ಎಂದು ಕರೆಯುತ್ತಿದ್ದರು ಎಂದರೆ ನಿಜ, ಸಾಕ್ಷಿಯು ಪುನಃ ಲೈನ್ ಮಾಯಿಗೇಗೌಡ ಹಾಗೂ ಮೇಸ್ತ್ರಿ ಮಾಯಿಗೇಗೌಡ ಎಂದು ಕರೆಯುತ್ತಿದ್ದರು ಎಂದು ನುಡಿಯುತ್ತಾರೆ. ನಮ್ಮ ಗ್ರಾಮದಲ್ಲಿ ಮಾಯಿಗೇಗೌಡ ಎಂಬ ಹೆಸರಿನ ಬಹಳ ವ್ಯಕ್ತಿಗಳಿದ್ದ ಕಾರಣ ಗುರುತಿಸುವ ಸಲುವಾಗಿ ಎಲೆಕ್ಟ್ರಿಕಲ್ ಮಾಯಿಗೇಗೌಡ ಎಂದು ಕರೆಯುತ್ತಿದ್ದರು ಎಂದರೆ ಸಾಕ್ಷಿಯು ಅವರು ಅದೇ ಕೆಲಸ ಮಾಡುತ್ತಿದ್ದ ಕಾರಣ ಹಾಗೆ ಕರೆಯುತ್ತಿದ್ದರು ಎಂದು ನುಡಿಯುತ್ತಾರೆ.

ದಿನಾಂಕ : 02.03.2021

ಓ.ಎಸ್ ನಂ.608/2013 ರಲ್ಲಿ
ಡಿ.ಡಬ್ಲ್ಯೂ-2(ಬಸವರಾಜು)

ಮಾಯಿಗೇಗೌಡರವರ ತಂದೆಯ ಹೆಸರು ಕಾಳೇಗೌಡ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಗ್ರಾಮದ ತಿಮ್ಮಯ್ಯನವರ ತಂದೆಯ ಹೆಸರು ಮಾಯಿಗೇಗೌಡ ಎಂದರೆ ಸಾಕ್ಷಿಯು ಮಾಯಗಣ್ಣ ಎಂದು ನುಡಿಯುತ್ತಾರೆ. ಇವರು ವ್ಯವಸಾಯಗಾರರಾಗಿದ್ದರು ಎಂದರೆ ಸರಿ. ಮಾಯಗಣ್ಣನವರ ತಂದೆಯ ಹೆಸರು ಕೆಂಚೇಗೌಡ ಎಂದರೆ ನನಗೆ ಗೊತ್ತಿಲ್ಲ. ಇವರ ಕುಟುಂಬದಲ್ಲಿ ಹಿಂದೆ ಯಾರೂ ಸರ್ಕಾರಿ ಉದ್ಯೋಗದಲ್ಲಿರಲಿಲ್ಲ ಎಂದರೆ ಸರಿ.

ದಾವಾ ಜಮೀನಿನ ಸರ್ವೇ ಕಾರ್ಯ ನಡೆಯುವಾಗ ನಾನು ಇರಲಿಲ್ಲ. ಕಲ್ಲು ಗಣಿಗಾರಿಕೆ ಮಾಡುವ ಸಲುವಾಗಿ ನಾನು ನನ್ನ ಜಮೀನನ್ನು 3 ನೇ ಪ್ರತಿವಾದಿಗೆ ಕೊಟ್ಟಿದ್ದೆ ಎಂದರೆ ಸರಿ, ಅದರಿಂದ ಪ್ರತಿ ವರ್ಷ ನನಗೆ ರಾಯಲ್ಟಿ ಬರುತ್ತದೆ ಎಂದರೆ ಸುಳ್ಳು, ಸಾಕ್ಷಿಯು ಮುಂದುವರೆದು ನಾನು 1 ಎಕರೆ ಜಮೀನು ಮಾರಾಟ ಮಾಡಿದ್ದೆ ಎಂದು ನುಡಿಯುತ್ತಾರೆ. ನಾನು ಉಳಿಸಿಕೊಂಡ ಜಮೀನಿಗೆ ಮಾರಾಟ ಮಾಡಿದ ಜಮೀನಿನಿಂದ ಕಲ್ಲು ಕೋರೆ ಕೆಲಸ ಮಾಡುವಾಗ ಬರುವ ಧೂಳು, ಕಲ್ಲಿನ ಚೂರುಗಳು ಬರುವ ಕಾರಣ ನಾನು 3 ನೇ ಪ್ರತಿವಾದಿಯಿಂದ ಪ್ರತಿ ವರ್ಷ ಇಂತಿಷ್ಟು ಹಣ ಎಂದು ಪಡೆಯುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಈಗ ಅಲ್ಲಿ ಕಲ್ಲು ಗಣಿಗಾರಿಕೆ ಮಾಡುತ್ತಿಲ್ಲ, ನಿಲ್ಲಿಸಿದ್ದಾರೆ ಎಂದು ನುಡಿಯುತ್ತಾರೆ. ಗಣಿಗಾರಿಕೆ ನಡೆಯುವಾಗ ನಾನು ಹಣ ಪಡೆಯುತ್ತಿದ್ದೆ ಎಂದರೆ ಸರಿಯಲ್ಲ.

ದಾವಾ ಸ್ವತ್ತು ತಿಮ್ಮಯ್ಯನವರಿಗೆ ಹೇಗೆ ಬಂತು ಎಂದು ನನಗೆ

ಗೊತ್ತಿಲ್ಲ ಎಂದರೆ ಸರಿ. ನಾನು ನನ್ನ ಪ್ರಮಾಣಪತ್ರದಲ್ಲಿ, ತಿಮ್ಮಯ್ಯನವರು ಸ್ವಾಧೀನದಲ್ಲಿದ್ದು, ಗೋಪಾಲರವರಿಗೆ ಮಾರಾಟ ಮಾಡಿರುತ್ತಾರೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ನಮ್ಮ ಗ್ರಾಮದಲ್ಲಿ ಯಾವುದೇ ಆಸ್ತಿ ಮಾರಾಟ ಮಾಡಿಲ್ಲ. ನಾನು ಕ್ರಯಪತ್ರಕ್ಕೆ ಸಹಿ ಮಾಡುವಾಗ 1ನೇ ಪ್ರತಿವಾದಿ ಯಾವ ಆಸ್ತಿ ಮಾರಾಟ ಮಾಡುತ್ತಿದ್ದಾರೆ ಅದು ಅವರಿಗೆ ಹೇಗೆ ಬಂತು ಎಂದು ತಿಳಿದುಕೊಂಡಿರಲಿಲ್ಲ ಎಂದರೆ ಸರಿ. ಉಪನೋಂದಣಿ ಕಛೇರಿಗೆ ನಾನು ಹೋಗಿದ್ದಾಗ ನನ್ನಲ್ಲಿ ಕ್ರಯಪತ್ರಕ್ಕೆ ಸಹಿ ಮಾಡಲು ಹೇಳಿದ ಕಾರಣ ನಾನು ಸಹಿ ಮಾಡಿದ್ದೆ ಎಂದರೆ ಸಾಕ್ಷಿಯು ಉಪನೋಂದಣಿ ಕಛೇರಿಯಲ್ಲಿ ಸಹಿ ಮಾಡಿದ್ದೆ ಎಂದು ನುಡಿಯುತ್ತಾರೆ. ಕ್ರಯಪತ್ರಕ್ಕೆ ಸಹಿ ಮಾಡುವ ಮೊದಲು 1ನೇ ಪ್ರತಿವಾದಿ ಹಾಗೂ 2 ಮತ್ತು 3ನೇ ಪ್ರತಿವಾದಿಗಳ ನಡುವೆ ಏನು ಮಾತುಕತೆಯಾಗಿತ್ತು ಎಂದು ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ 2 ಮತ್ತು 3ನೇ ಪ್ರತಿವಾದಿಗಳಿಗೆ ಏನೇನು ದಾಖಲೆಗಳು ಕೊಟ್ಟಿದ್ದರು ಎಂದು ನನಗೆ ಗೊತ್ತಿಲ್ಲ.

ನಾನು ಹೇಳಿದ ರೀತಿ 2 ಮತ್ತು 3ನೇ ಪ್ರತಿವಾದಿಗಳು ದಾವಾ ಸ್ವತ್ತಿನ ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ, ವಾದಿಯರೇ ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಊರಿನಲ್ಲಿ ನಂಜೇಗೌಡನ ಮಗ ಬಸವೇಗೌಡ ಎಂಬುವವರಿದ್ದರು ಎಂದರೆ ನನಗೆ ಗೊತ್ತಿಲ್ಲ. ನಂಜೇಗೌಡನ ಮಗ ಬಸವೇಗೌಡ ಎಲೆಕ್ಟ್ರಿಕಲ್ ಮಾಯಿಗೇಗೌಡರಿಗೆ ಆಸ್ತಿ ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಮಾಯಿಗೇಗೌಡರು ತಮ್ಮ ಜೀವಿತಾವಧಿಯಲ್ಲಿ ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿದ್ದು ಅವರ ಮರಣಾ ನಂತರ ಅವರ ಹೆಂಡತಿ

ದಿನಾಂಕ ಃ 02.03.2021 ಓ.ಎಸ್ ನಂ.608/2013 ರಲ್ಲಿ
ಡಿ.ಡಬ್ಲ್ಯೂ-2(ಬಸವರಾಜು)

ಮಕ್ಕಳು ಸದರಿ ಸ್ವತ್ತಿನ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 2 ಮತ್ತು 3 ನೇ ಪ್ರತಿವಾದಿಗಳಿಗೆ ನಾನು ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ಮತ್ತು 3 ನೇ ಪ್ರತಿವಾದಿಗಳು ಬರೆಸಿದ್ದ ಪ್ರಮಾಣಪತ್ರಕ್ಕೆ ನಾನು ಸಹಿ ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಅನುಪಮ ಲಕ್ಷ್ಮಿ.ಬಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ರಾಮನಗರ.